StudentBounty.com

**INTERNATIONAL INDIAN SCHOOL, DAMMAM**
**SUMMATIVE ASSESSMENT– II MARCH - 2013-14**
**THIRD LANGUAGE – KANNADA**

**Class : VIII** | **Time : 3Hrs**
**General Instructions:** | **Marks : 90**

1. Carefully read the question before answering.
2. All questions must be numbered correctly as in the question paper.

---

ವಿಭಾಗ – ಅ (Marks 20)

I. ಆವರಣದಿಂದ ಸರಿಯಾದ ಪದವನ್ನು ಆರಿಸಿ ಬರೆಯಿರಿ. (1x10=10)

೧. ನಾನು _________ ದಿನ ಕಳೆದ ಮೇಲೆ ಅರಮನೆಗೆ ಬರುತ್ತೇನೆ. ( ನಾಲ್ಕು, ಐದು, ಆರು)

೨. __________ರಿಂದ ಕ್ರೀಡಾಕೂಟಗಳನ್ನು ಮತ್ತೆ ಆರಂಭಿಸಲಾಯಿತು. (೧೮೫೫, ೧೯೫೫, ೧೭೫೯)

೩. ಗಣತಿಯಲ್ಲಿ ________ಪಳಗಿದವರಿಲ್ಲ. (ಇನ್ನೆಷ್ಟು, ನನ್ನಷ್ಟು, ನಿನ್ನಷ್ಟು)

೪. ಒಬ್ಬ ರಾಜನು ________ಯನ್ನೇರಿ ಬೇಟೆಗೆ ಹೊರಟಿದ್ದನು. (ಆನೆ, ಕುದುರೆ, ಹುಲಿ)

೫. ಮತದಾರರ ತಲೆ _______ಬಂದಿರುವೆನಲ್ಲ. (ಎಣಿಸಿ, ಉಣಿಸಿ, ತಣಿಸಿ)

೬. ಅವರು _______ ಕ್ಷಣ ಬೆಪ್ಪರಂತೆ ಮುಖ-ಮುಖ ನೋಡಿಕೊಂಡರು. (ಒಂದು, ಎರಡು, ಮೂರು)

೭. ಗೋಳಗುಮ್ಮಟದ ಒಳಭಾಗದಲ್ಲಿ ಪಿಸುಮಾತಿನ ಒಂದು _______ಯಿದೆ. (ಅಟ್ಟಿಗೆ, ಪೆಟ್ಟಿಗೆ, ಕಟ್ಟಿಗೆ)

೮. ಒಲಂಪಿಕ್ ಕ್ರೀಡಾ ಸ್ಪರ್ಧೆಗಳು ಮೊದಲು ಆರಂಭಗೊಂಡಿದ್ದು ________ ದೇಶದಲ್ಲಿ. (ಗ್ರೀಸ್, ಜಪಾನ್, ಜರ್ಮನಿ)

೯. ಅಕ್ಬರ್ ಚಕ್ರವರ್ತಿಯು _______ ಸಭೆಗೆ ದಯಮಾಡಿಸಿದನು. (ರಾಜ, ಲೋಕ, ವಿಧಾನ)

೧೦. ಮಾನವನಿಗೆ ಹೆಚ್ಚು ಪ್ರಿಯವಾದದ್ದು _________? (ಯಾವುದು, ಏಕೆ, ಏನು)

II. ಈ ಕೆಳಗಿನ ಪದಗಳ ಅರ್ಥ ಬರೆಯಿರಿ. (Any 10) ( ½ x10=5)

೧. ಇಮ್ಮಡಿ  ೨. ಬಾಧಕ  ೩. ಪತನ  ೪. ಕ್ರೀಡಾಂಗಣ  ೫. ದಯಮಾಡಿಸಿದ  ೬. ಅಚ್ಚರಿ

೭. ರಮಣೀಯ  ೮. ಸೂತ್ರಧಾರ  ೯. ವಿಧಾನ  ೧೦. ರೂಪಿಸು  ೧೧. ಮುಕ್ತಗೊಳಿಸು

III. ಈ ಕೆಳಗಿನ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ. (Any 5) ( 1x5=5)

೧. ನೀಡು  ೨. ಖ್ಯಾತಿ  ೩. ಸಂಚಾರ  ೪. ವಿನ್ಯಾಸ  ೫. ಗುಟ್ಟು  ೬. ಕೆಲಸ

ವಿಭಾಗ – ಆ (Marks 35)

IV. ಈ ಕೆಳಗಿನ ಪದಗಳ ಏಕವಚನ/ಬಹುವಚನ ರೂಪ ಬರೆಯಿರಿ. ( ½ x7=3 ½ )

೧. ಸೂಚನೆ  ೨. ಮನುಷ್ಯ  ೩. ಮಕ್ಕಳು  ೪. ಹೆಂಡತಿಯರು

೫. ಪಂಡಿತ  ೬. ಗೋಪುರ  ೭. ರಾಜ

V. ಬಿಟ್ಟ ಪದ ತುಂಬಿಸಿ. (1x6=6)

೧. ಚಕ್ರವರ್ತಿಯು ಎಲ್ಲರನ್ನೂ ಕುರಿತು _______ ಪ್ರಶ್ನೆಯನ್ನು ಕೇಳಿದನು.

೨. ಎಡಗೈಯಲ್ಲಿದ್ದ ಗಿಣಿಗೆ _______ರೂಪಾಯಿ ಬೆಲೆ.

೩. ಹಿಂದೂಗಳು ಅನೇಕ __________ ಆಚರಿಸುತ್ತಾರೆ.

೪. ಕರ್ನಾಟಕದ ಆಡಳಿತ ಭಾಷೆ _________.



www.StudentBounty.com
Homework Help & Pastpapers

೫. ಹಣವಂತ = ______ + _______

೬. ಬಿಜಾಪುರದ ಇನ್ನೊಂದು ಹೆಸರು_______.

VI. ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ. (1x4=4)

೧. ಸಿದ್ಧತೆ ೨. ಮಾರಾಟ ೩. ಸಮಾಧಾನ ೪. ಬಹುಮಾನ

VII. ಹೊಂದಿಸಿ ಬರೆಯಿರಿ. ( ½ x12=6)

| | | |
|---|---|---|
| ೧. ಅಂತರ ರಾಷ್ಟ್ರೀಯ | - | ರೋಜಾ |
| ೨. ಬೇಟೆಗೆ | - | ಅಂಗಳ |
| ೩. ಇಬ್ರಾಹಿಂ | - | ವಿಚಾರವಂತ |
| ೪. ಅವಶೇಷಗಳು | - | ಗಮನಿಸಿದ |
| ೫. ದನಗಣತಿ ಮನೆಗಣತಿ | - | ಬೆಳಗಾಯಿತು |
| ೬. ದೇವತೆಗಳ | - | ಮಾಡಿದರು |
| ೭. ಪಂಜರಗಳನ್ನು | - | ಒಲಂಪಿಕ್ ಸಮಿತಿ |
| ೮. ಅರಮನೆಯ | - | ಮಾಡಿರುವೆ ಎಲ್ಲ |
| ೯. ವಿಚಾರ + ವಂತ | - | ಪತ್ತೆಯಾದವು |
| ೧೦. ಭವಿಷ್ಯವಾಣಿ | - | ಹೊರಟಿದ್ದ |
| ೧೧. ರಾಜ್ಯಭಾರ | - | ಸಂಗಮ ಸ್ಥಳ |
| ೧೨. ಮರುದಿನ | - | ನುಡಿಯುತ್ತಾನೆ |

VIII. ಈ ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ. (1x4=4)

೧. ಹೇಳಿ ಬಾಯ್ಬಿಟ್ಟು ಇದ್ದುದೇನೇ ಇರಲಿ

೨. ನಗರವನ್ನು ಮಾಡುತ್ತಾರೆ ನಿರ್ಮಾಣ ಲಂಕಾ

೩. ಸ್ಥಳ ಪವಿತ್ರ ವಾಸಮಾಡುವ ದೇವತೆಗಳು

೪. ಬರದು ಬಿಕ್ಕಟ್ಟು ಬಾಧಕವು ಏನಿಲ್ಲ

IX. ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ. (1x4=4)

೧.19 ೨. 37 ೩. 44 ೪. 100

X. ಈ ಕೆಳಗಿನ ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಬರೆಯಿರಿ. ( ½ x5=2 ½ )

೧. ರುಜರಾಹಾಮ ೨. ನಮಾಕ ರಾಬಾ ೩. ವಭವ್ಯೆ ೪. ನಿಧಾಜರಾ ೫. ಧಿಮಾಸ

XI. ಈ ಕೆಳಗಿನ ಪದಕ್ಕೆ ಪ್ರಥಮಾ, ದ್ವಿತೀಯ ಮತ್ತು ತೃತೀಯ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಬರೆಯಿರಿ.

. ೧. ಮರ (1x3=3)

XII. ಈ ಕೆಳಗಿನ ವಾಕ್ಯಗಳಿಗೆ ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಬರೆಯಿರಿ. ( ½ x4=2)

೧. ಈ ಪುಸ್ತಕ______ ಎಷ್ಟು ಚಿತ್ರಗಳಿವೆ?

೨. ಮೋಹನ ಶಾಲೆ______ ಹೊರಟಿದ್ದಾನೆ.



StudentBounty.com
www.StudentBounty.com
Homework Help & Pastpapers

೩. ನೀವು ಮೈದಾನ______ ಹೋಗಿ ಆಡಿಕೊಳ್ಳಿ.

೪. ಶಿಕ್ಷಕರು ರಮೇಶ______ ಕರೆದರು.

ವಿಭಾಗ - ಇ. (10 marks)

XIII. ಈ ಗದ್ಯಭಾಗವನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. (1x10=10)

ನಾವು ಅನೇಕ ಪ್ರಾಣಿಗಳನ್ನು ಸಾಕುತ್ತೇವೆ. ಅವುಗಳಲ್ಲಿ ಹಸು ಸಹ ಒಂದು. ಹಸುವನ್ನು ಗೋವು, ಗೋಮಾತೆ, ಆಕಳು, ಕಾಮಧೇನು ಎಂಬ ಹೆಸರುಗಳಿಂದಲೂ ಕರೆಯುತ್ತೇವೆ.

ಹಸು ತುಂಬಾ ಸಾಧು ಪ್ರಾಣಿ. ಅದು ಒಂದು ಉಪಯುಕ್ತ ಪ್ರಾಣಿಯೂ ಹೌದು. ಆದುದರಿಂದ ಜನ ಅದನ್ನು ಪ್ರೀತಿಯಿಂದ ಸಾಕುತ್ತಾರೆ. ಹಸುಗಳು ಕಪ್ಪು, ಬಿಳಿ, ಕಂದು, ಕಪ್ಪು-ಬಿಳಿ ಮಿಶ್ರಿತ, ಕಂದು-ಬಿಳಿ ಮಿಶ್ರಿತ ಹೀಗೆ ನಾನಾ ಬಣ್ಣಗಳಲ್ಲಿರುತ್ತವೆ. ಹಸುಗಳು ಶುದ್ಧ ಸಸ್ಯಾಹಾರಿ ಪ್ರಾಣಿಗಳು. ಹಸಿರು ಹುಲ್ಲು, ಭೂಸಾ ಅವುಗಳ ಮುಖ್ಯ ಆಹಾರವಾಗಿದೆ.

ಹಸುಗಳನ್ನು ಜಗತ್ತಿನ ಎಲ್ಲ ದೇಶಗಳಲ್ಲೂ ಸಾಕುತ್ತಾರೆ. ಆದರೂ ಅವುಗಳನ್ನು ಕಾಳಜಿಯಿಂದ ಸಾಕುವ ದೇಶಗಳು ಕೆಲವು ಮಾತ್ರ. ಅವುಗಳಲ್ಲಿ ಭಾರತ, ಅಮೆರಿಕ, ಇಂಗ್ಲೆಂಡ್, ಜಪಾನ್, ಆಫ್ರಿಕಾ ದೇಶಗಳು ಪ್ರಮುಖವಾಗಿವೆ. ವಿದೇಶೀಯರು ತಮ್ಮ ಹಸುಗಳಿಗೆ ಸಾಕಷ್ಟು ಪುಷ್ಟಿಕರ ಆಹಾರ ನೀಡಿ, ಹೆಚ್ಚು ಮುತುವರ್ಜಿಯಿಂದ ಸಾಕುತ್ತಾರೆ. ಭಾರತದಲ್ಲಿ ಗುಜರಾತ್ ರಾಜ್ಯದ ಹಸುಗಳು ತುಂಬಾ ಹೆಸರುವಾಸಿಯಾಗಿವೆ.

೧. ಹಸುವನ್ನು ಯಾವ ಯಾವ ಹೆಸರುಗಳಿಂದ ಕರೆಯುತ್ತಾರೆ?

೨. ಹಸು ತುಂಬಾ __________ ಪ್ರಾಣಿ.

೩. ಹಸುಗಳು ಯಾವ ಯಾವ ಬಣ್ಣಗಳಲ್ಲಿರುತ್ತವೆ?

೪. ಹಸುಗಳು ಶುದ್ಧ _________ ಪ್ರಾಣಿಗಳು.

೫. ಹಸುಗಳ ಮುಖ್ಯ ಆಹಾರ ಯಾವುದು?

೬. ಹಸುಗಳನ್ನು ಕೆಲವು ದೇಶಗಳಲ್ಲಿ ಸಾಕುತ್ತಾರೆ. (ಸರಿ/ತಪ್ಪು)

೭. ಹಸುಗಳನ್ನು ಸಾಕುವ ಪ್ರಮುಖ ದೇಶಗಳು ಯಾವುವು?

೮. ಭಾರತದ ಯಾವ ರಾಜ್ಯದ ಹಸುಗಳು ತುಂಬಾ ಹೆಸರುವಾಸಿಯಾಗಿವೆ?

೯. ಹಸು ಒಂದು ಉಪಯುಕ್ತ _________. (ಪ್ರಾಣಿ, ಪಕ್ಷಿ)

೧೦. ಈ ಭಾಗಕ್ಕೆ ನಿಮ್ಮ ಶೀರ್ಷಿಕೆಯನ್ನು ಬರೆಯಿರಿ.

ವಿಭಾಗ – ಈ (25 marks)

XIV. ಈ ಮಾತನ್ನು ಯಾರು ಯಾರಿಗೆ ಹೇಳಿದರು? (1x2=2)

೧. "ನಾನು ಈ ಗಿಣಿಗಳ ಗುಣಕ್ಕೆ ತಕ್ಕಂತೆ ಬೆಲೆ ನಿಗದಿ ಮಾಡಿದ್ದೇನೆ"

೨. "ಹಾಗಾದರೆ ಈ ಮಾತನ್ನು ಸಾಬೀತು ಪಡಿಸಿ ತೋರಿಸಬಲ್ಲೆಯಾ?"

XV. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. (3 marks)

೧. ಹಲವಾರು _________ _________ _________

_________ _________ _________ ನನಗೆ

_________ _________ _________ _________

_________ _________ ಮುಂದಿನಾ ಮನೆಗೆ ।



StudentBounty.com
www.StudentBounty.com
Homework Help & Pastpapers

StudentBounty.com

XVI. ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (1x10=10)

೧. ಒಲಂಪಿಕ್ ಕ್ರೀಡೆಗಳು ಎಷ್ಟು ದಿನಗಳ ಕಾಲ ನಡೆಯುತ್ತದೆ?

೨. ಜನಗಣತಿ ಕಾರ್ಯಕ್ರಮವು ಯಾವ ಯೋಜನೆಗೆ ಮೂಲಾಧಾರ?

೩. ರಾಜನಿಗೆ ಯಾರ ಮೇಲೆ ಪ್ರೀತಿ ಉಂಟಾಯಿತು?

೪. ಬೀರಬಲ್ಲನು ಕೋತಿ ಹಾಗೂ ಅದರ ಮರಿಯನ್ನು ಯಾರ ಮೂಲಕ ತರಿಸಿದ್ದನು?

೫. ಬಿಜಾಪುರವು ಎಂತಹ ನಗರವಾಗಿ ಬೆಳೆದು ಬಂದಿದೆ?

೬. ಕುಲು ಎಂಬ ಸ್ಥಳ ಹೇಗಿದೆ?

೭. ಕೋತಿಯು ಯಾರ ಪ್ರಾಣದ ಚಿಂತೆಯನ್ನು ಮರೆಯಿತು?

೮. ೧೯೮೪ರ ಒಲಂಪಿಕ್ ಕ್ರೀಡೆಗಳು ಎಲ್ಲಿ ನಡೆದವು?

೯. ಬಿಜಾಪುರವು ಯಾವುದಕ್ಕೆ ಪ್ರಸಿದ್ಧಿ ಪಡೆದಿದೆ?

೧೦. ಜನಗಣತಿದಾರ ಪದ್ಯವನ್ನು ಬರೆದ ಕವಿ ಯಾರು?

XVII.ಉತ್ತರಿಸಿ.(Any 4) (2 ½ x4=10)

೧. ಒಲಂಪಿಕ್ ಜ್ಯೋತಿ ಬೆಳಗುವುದನ್ನು ಯಾವಾಗಿನಿಂದ ಮತ್ತು ಎಲ್ಲಿಂದ ಪ್ರಾರಂಭಿಸಲಾಯಿತು?

೨. ರಾಜನು ಗಿಣಿಗಳನ್ನು ತೆಗೆದುಕೊಂಡ ನಂತರ ಬೇಟೆಗಾರನಿಗೆ ಏನು ಹೇಳಿದನು?

೩. ಬೀರಬಲ್ಲನು ಪರೀಕ್ಷೆ - ಪ್ರಯೋಗಗಳು ಮುಗಿದ ಮೇಲೆ ಏನು ಮಾಡಿದನು?

೪. ವಿಜಯದಶಮಿಯ ದಿನ ವ್ಯಾಸ ನದಿಯ ಬಳಿ ಏನು ನಡೆಯುತ್ತದೆ?

೫. ಒಂದು ಗಿಣಿಯಲ್ಲಿ ಕೆಟ್ಟಗುಣ, ಇನ್ನೊಂದು ಗಿಣಿಯಲ್ಲಿ ಒಳ್ಳೆಯ ಗುಣ ಬರಲು ಕಾರಣವೇನು?

೬. ಅಕ್ಬರನ ಪ್ರಶ್ನೆಗೆ ಬೀರಬಲ್ಲನು ಏನೆಂದು ಉತ್ತರಿಸಿದನು?

---



www.StudentBounty.com
Homework Help & Pastpapers